ಶ್ರೀ ಕೃಷ್ಣ ಭೈರೇಗೌಡ : ಮಾನ್ಯ ಅಧ್ಯಕ್ಷರೆ, ವಿಶೇಷ ಘಟಕ ಯೋಜನೆ ಯಡಿ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಬರತಕ್ಕಂತಹ ಹಣದಲ್ಲಿ ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ ಶೇ. 90 ರಷ್ಟು ಕೊಡುತ್ತಿದ್ದೇವೆ. ಅದನ್ನು ಬಿಟ್ಟು ಎಲ್ಲರಿಗೂ ಕೊಡಬೇಕೆಂದರೆ ಸುಮಾರು 500 ಕೋಟಿ ಅನುದಾನ ಬೇಕಾಗುತ್ತದೆ. Customer hire centre ಎಂದು ಮಾಡಿ ಅದಕ್ಕೆ ಪರ್ಯಾಯವಾಗಿ ಬಹಳ ಕಡಿಮೆ ಬಾಡಿಗೆ ದರದಲ್ಲಿ ಎಲ್ಲಾ ರೈತರಿಗೂ ಸಹ ಯಂತ್ರೋಪಕರಣಗಳ ಸೌಲಭ್ಯ ಸಿಗುತ್ತದೆ ಎನ್ನುವುದನ್ನು ಹೇಳುವುದಕ್ಕೆ ಬಯಸುತ್ತೇನೆ.

ಅಧ್ಯಕ್ಷರು : ಮಾನ್ಯ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್ ನಿಮ್ಮ ಪ್ರಶ್ನೆಗೆ ಕಾಲಾವಕಾಶ ಕೇಳಿದ್ದಾರೆ. ಶ್ರೀ ಬಿ. ಎನ್. ವಿಜಯಕುಮಾರ್ ನಿಮ್ಮ ಪ್ರಶ್ನೆ ಬೇರೆ ಇಲಾಖೆಗೆ ವರ್ಗಾವಣೆಯಾಗಿದೆ. ವೆಂಕಟೇಶ್ ಕೆ. ಇಲ್ಲ, ಸಿ. ಟಿ. ರವಿ ಇಲ್ಲ,

142 (1511); ಶ್ರೀ ವೆಂಕಟೇಶ್ ಕೆ. (ಪಿರಿಯಾಪಟ್ಟಣ)

143 (407); ಶ್ರೀ ಸಿ. ಟಿ. ರವಿ (ಚಿಕ್ಕಮಗಳೂರು)

(ಮಾನ್ಯ ಸದಸ್ಯರುಗಳು ಗೈರುಹಾಜರಿದ್ದರು)

ಶ್ರೀ ಕೆ. ಶಿವಮೂರ್ತಿ : (ಶ್ರೀ ಗುರುಪಾದಗೌಡ ಸಂಗನಗೌಡ ಪಾಟೀಲ್ ಇವರ ಪರವಾಗಿ) : ಮಾನ್ಯ ಅಧ್ಯಕ್ಷರೆ, ಪ್ರಶ್ನೆ ಸಂಖ್ಯೆ 1347 ನ್ನು ಮಾನ್ಯ ಇಂಧನ ಸಚಿವರಿಗೆ ಕೇಳುತ್ತೇನೆ.

ಶ್ರೀ ಡಿ. ಕೆ. ಶಿವಕುಮಾರ್ (ಮಾನ್ಯ ಇಂಧನ ಸಚಿವರು) : ಮಾನ್ಯ ಅಧ್ಯಕ್ಷರೆ, ಉತ್ತರಗಳನ್ನು ಒದಗಿಸಲಾಗಿದೆ.

ನಿರಂತರ ಜ್ಯೋತಿ ಕುರಿತು

144 (1347) : ಶ್ರೀ ಗುರುಪಾದಗೌಡ ಸಂಗನಗೌಡ ಪಾಟೀಲ್ (ರೋಣ)

(ಅ) ಗದಗ ಜಿಲ್ಲೆಯಲ್ಲಿ ನಿರಂತರ ಜ್ಯೋತಿ ಯೋಜನೆ ಅನುಷ್ಠಾನ ಮಾಡಲು ಸರ್ಕಾರ ನಿಗದಿ ಮಾಡಿದ ಕಾಲಮಿತಿ ಎಷ್ಟು;

(ಆ) ಗದಗ ಜಿಲ್ಲೆಯಲ್ಲಿ ಈಗಾಗಲೇ ಕೈಗೊಂಡ ಕಾರ್ಯಕ್ರಮಗಳ ಬಗ್ಗೆ ವಿವರ ನೀಡುವುದು;

(ಇ) ಗದಗ ಜಿಲ್ಲೆಯಲ್ಲಿ ಯೋಜನೆ ವಿಳಂಬವಾಗಲು ಕಾರಣಗಳೇನು;

(ಈ) ಯಾವಾಗ ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಕ್ಕೆ ಬರುತ್ತದೆ?

ಶ್ರೀ ಡಿ. ಕೆ. ಶಿವಕುಮಾರ್ (ಇಂಧನ ಸಚಿವರು)

(ಅ) ಗದಗ ಜಿಲ್ಲೆಯಲ್ಲಿ 5 ತಾಲ್ಲೂಕುಗಳಿದ್ದು, ನಿರಂತರ ಜ್ಯೋತಿ ಯೋಜನೆಯನ್ನು ಅನುಷ್ಠಾನ ಮಾಡಲು ನಿಗದಿಪಡಿಸಿದ ಕಾಲಮಿತಿಯ ವಿವರಗಳು ಈ ಕೆಳಕಂಡಂತಿವೆ:

ಕ್ರ. ಸಂ.	ತಾಲ್ಲೂಕು	ಹಂತ	ಕಾರ್ಯಾದೇಶ ನೀಡಿದ ದಿನಾಂಕ	ಕಾರ್ಯಾದೇಶ ನೀಡಿದ ದಿನಾಂಕದಿಂದ ನಿಗದಿಪಡಿಸಿದ ಅವಧಿ
1	ಮುಂಡರಗಿ	ಹಂತ–1	31–5–2011	9 ತಿಂಗಳು
2	ಶಿರಹಟ್ಟಿ			
3	ನರಗುಂದ			
4	ಗದಗ	ಹಂತ–2	10–1–2012	6 ತಿಂಗಳು
5	ರೋಣ			

(ಆ) ಗದಗ ಜಿಲ್ಲೆಯಲ್ಲಿ ಈಗಾಗಲೆ ಕೈಗೊಂಡ ಕಾರ್ಯಕ್ರಮಗಳ ವಿವರ ಈ ಕೆಳಕಂಡಂತಿವೆ:

ಕ್ರ. ಸಂ.	ತಾಲ್ಲೂಕು	ಪ್ರಸ್ತಾವಿತ 11 ಕೆ. ವಿ. ಮಾರ್ಗಗಳು	ಪೂರ್ಣಗೊಂಡ ಮಾರ್ಗಗಳ ಕಾಮಗಾರಿಗಳ ಸಂಖ್ಯೆ	ಕೈಗೊಳ್ಳಬೇಕಾದ ಬಾಕಿ ಮಾರ್ಗಗಳ ಕಾಮಗಾರಿಗಳ ಸಂಖ್ಯೆ
1	ಮುಂಡರಗಿ	6	6	0
2	ಶಿರಹಟ್ಟಿ	7	6	1
3	ನರಗುಂದ	3	3	0
4	ಗದಗ	5	5	0
5	ರೋಣ	11	11	0
	ಒಟ್ಟು	**32**	**31**	**1**

(ಇ) ಗದಗ ಜಿಲ್ಲೆಯಲ್ಲಿ ನಿರಂತರ ಜ್ಯೋತಿ ಯೋಜನೆಯ ವಿಳಂಬವಾಗಲು ಕಾರಣಗಳು ಈ ಕೆಳಕಂಡಂತಿವೆ:

1. ಕಂಬಗಳನ್ನು ಅಳವಡಿಸಲು ಕೆಲವು ಪ್ರದೇಶಗಳಲ್ಲಿ ಸಾರ್ವಜನಿ ಕರಿಂದ ಪ್ರತಿರೋಧ ಉಂಟಾಗಿರುವುದು.

2. ಅರಣ್ಯ ಪ್ರದೇಶಗಳಲ್ಲಿ ಮಾರ್ಗ ನಿರ್ಮಿಸಲು ಮತ್ತು ರೈಲು ಮಾರ್ಗದಡಿಯಲ್ಲಿ ಕೇಬಲ್ ಅಳವಡಿಸಲು ಸಂಬಂಧಿಸಿದ ಇಲಾಖೆ ಗಳಿಂದ ಅನುಮತಿ ದೊರಕುವುದು ವಿಳಂಬವಾಗಿರುವುದರಿಂದ.

3. ಗುತ್ತಿಗೆದಾರರಿಗೆ ಪೂರೈಸಬೇಕಾಗಿರುವ ಸಾಮಗ್ರಿಗಳಾದ 8 ಮೀಟರ್ ಕಂಬಗಳು ಹಾಗೂ ಹಾರ್ಡ್‌ವೇರ್ ಸಾಮಗ್ರಿಗಳನ್ನು ಸರಬರಾಜುದಾರರು ನಿಗದಿತ ಸಮಯದಲ್ಲಿ ಪೂರೈಸಲು ವಿಳಂಬ ಮಾಡಿರುವುದು.

(ಈ) ಜುಲೈ–2014 ರೊಳಗಾಗಿ ಬಾಕಿ ಕಾಮಗಾರಿಗಳನ್ನು ಮುಗಿಸಿ ಎಲ್ಲಾ ಮಾರ್ಗಗಳನ್ನು ಚಾಲನೆಗೊಳಿಸಲು ಕ್ರಮ ಕೈಗೊಳ್ಳಲಾಗಿದೆ.

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಗುರುಪಾದಗೌಡ ಸಂಗನಗೌಡ ಪಾಟೀಲ (ರೋಣ), ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 1347ಕ್ಕೆ ಪೂರಕ ಟಿಪ್ಪಣಿ.

ನಿರಂತರ ಜ್ಯೋತಿ ಯೋಜನೆಯು ಕರ್ನಾಟಕ ಸರ್ಕಾರದ ಒಂದು ಮಹತ್ತರ ಯೋಜನೆಯಾಗಿದೆ. ಗ್ರಾಮೀಣ ಪ್ರದೇಶದಲ್ಲಿರುವ ಕೃಷಿ ಮತ್ತು ಕೃಷಿಯೇತರ ವಿದ್ಯುತ್ ಸ್ಥಾವರಗಳನ್ನು ಪ್ರತ್ಯೇಕ 11 ಕೆವಿ ವಿದ್ಯುತ್ ಮಾರ್ಗಗಳನ್ನು ನಿರ್ಮಿಸಿ ಬೇರ್ಪಡಿಸುವ ಯೋಜನೆಯಾ ಗಿರುತ್ತದೆ.

ಈ ಯೋಜನೆಯ ಪ್ರಮುಖ ಅಂಶಗಳು :

ಗ್ರಾಮೀಣ ಪ್ರದೇಶದಲ್ಲಿರುವ ಕೃಷಿಯೇತರ ಸ್ಥಾವರಗಳಿಗೆ 24 * 7 ನಿರಂತರ ವಿದ್ಯುತ್ ಸರಬರಾಜು ಮಾಡುವುದು.

ಕೃಷಿ ಸ್ಥಾವರಗಳಿಗೆ ಸರಬರಾಜು ಮಾಡುವ ವಿದ್ಯುತ್ ಪ್ರಮಾಣವನ್ನು ನಿಖರವಾಗಿ ಅಳತೆ ಮಾಡುವುದು.

ಉತ್ತಮ ಗುಣಮಟ್ಟದ ವಿದ್ಯುತ್ ಸರಬರಾಜು ಮಾಡುವುದು.

ಫೀಡರ್‌ನ ಕಟ್ಟಕಡೆ ಭಾಗದ ವಿದ್ಯುತ್ ಸ್ಥಾವರಗಳಿಗೆ ಉತ್ತಮ ವೋಲ್ಟೇಜ್ ನೀಡುವುದು.

ಪರಿವರ್ತಕಗಳ ವಿಫಲತೆಗಳನ್ನು ಕಡಿಮೆಗೊಳಿಸುವುದು.

ತಾಂತ್ರಿಕ ನಷ್ಟವನ್ನು ಕಡಿಮೆಗೊಳಿಸುವುದು.

ವಿದ್ಯುತ್ ಕಳವು ತಡೆಯುವುದು.

ರಾಜ್ಯದಲ್ಲಿ ನಿರಂತರಜ್ಯೋತಿ ಯೋಜನೆಯನ್ನು 2008–09ನೇ ಸಾಲಿನಲ್ಲಿ ಪ್ರಾಯೋಗಿಕವಾಗಿ ಪ್ರಾರಂಭಗೊಳಿಸಲಾಯಿತು. ಈ

ಯೋಜನೆ ಯನ್ನು ಎರಡು ಹಂತಗಳಲ್ಲಿ ಒಟ್ಟು 128 ತಾಲ್ಲೂಕುಗಳಲ್ಲಿ ಅನುಷ್ಠಾನ ಗೊಳಿಸಲಾಗುತ್ತಿದೆ.

ನಿರಂತರಜ್ಯೋತಿ ಯೋಜನೆಯನ್ನು ಒಟ್ಟು ರೂ. 2123 ಕೋಟಿಗಳ ಅಂದಾಜಿನಲ್ಲಿ ಅನುಷ್ಠಾನಗೊಳಿಸುವ ಬಗ್ಗೆ ರಾಜ್ಯ ಸರ್ಕಾರದ ಅನುಮೋದನೆ ನೀಡಿದ್ದು, ಯೋಜನೆಯ ಶೇ. 40 ರಷ್ಟು ವೆಚ್ಚವನ್ನು ರಾಜ್ಯ ಸರ್ಕಾರ ಈಕ್ವಿಟಿಯಾಗಿ ಒದಗಿಸಲು, ಮತ್ತು ಉಳಿದ ಶೇ. 60 ರಷ್ಟು ಯೋಜನೆಯ ವೆಚ್ಚವನ್ನು ವಿರತಣಾ ಕಂಪನಿಗಳು ಸಾಲದ ರೂಪದಲ್ಲಿ ಭರಿಸುವುದಾಗಿರುತ್ತದೆ.

ನಿರಂತರಜ್ಯೋತಿ ಯೋಜನೆಯ ಪ್ರಗತಿಯ ವಿವರಗಳು : (31–05–2014ರ ತನಕ)

ಕ್ರ. ಸಂ.	ಕಂಪನಿಯ ಹೆಸರು	ಒಟ್ಟು ತಾಲ್ಲೂಕುಗಳು	ಪ್ರಸ್ತಾವಿತ ಎನ್. ಜೆ. 11 ಕೆ. ವಿ. ಮಾರ್ಗಗಳು	ಭೌತಿಕ ಪ್ರಗತಿ (11 ಕೆ.ವಿ. ಮಾರ್ಗಗಳ ಕಾಮಗಾರಿಗಳನ್ನು ಪೂರ್ಣಗೊಳಿಸಿದ ಸಂಖ್ಯೆ)	ಶೇಕಡವಾರು ಪ್ರಗತಿ (%)
1	ಬೆಸ್ಕಾಂ	40	550	430	78%
2	ಸೆಸ್ಕ್	24	396	138	35%
3	ಹೆಸ್ಕಾಂ	34	456	309	68%
4	ಜೆಸ್ಕಾಂ	30	344	166	48%
	ಒಟ್ಟು	**128**	**1746**	**1043**	**60%**

ಗದಗ ಜಿಲ್ಲೆಯ ನಿರಂತರಜ್ಯೋತಿ ಯೋಜನೆಗೆ ಸಂಬಂಧಿಸಿದ ಮಾಹಿತಿಗಳು :

ಗದಗ ಜಿಲ್ಲೆಯ 5 ತಾಲ್ಲೂಕುಗಳಲ್ಲಿ ನಿರಂತರಜ್ಯೋತಿ ಯೋಜನೆಯನ್ನು 2 ಹಂತಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

ಮೊದಲ ಹಂತದಲ್ಲಿ ಮುಂಡರಗಿ, ಶಿರಹಟ್ಟಿ ಹಾಗೂ ನರಗುಂದ ತಾಲ್ಲೂಕುಗಳಲ್ಲಿನ ಒಟ್ಟು 123 ಹಳ್ಳಿಗಳಿಗೆ 16 ಸಂಖ್ಯೆಯ 11 ಕೆ. ವಿ. ಮಾರ್ಗಗಳು ಒಳಗೊಂಡಿದ್ದು, ಮೇ–2011 ರಂದು ಮೆ॥ ಪ್ರವೀಣ್ ಇಲೆಕ್ಟ್ರೀಕಲ್ಸ್, ಗದಗ ಇವರಿಗೆ ಅವಾರ್ಡ್ ನೀಡಲಾಗಿದೆ.

ಎರಡನೆ ಹಂತದಲ್ಲಿ ಗದಗ ಹಾಗೂ ರೋಣ ತಾಲ್ಲೂಕುಗಳಲ್ಲಿನ ಒಟ್ಟು 130 ಹಳ್ಳಿಗಳಿಗೆ 16 ಸಂಖ್ಯೆಯ 11 ಕೆ. ವಿ. ಮಾರ್ಗಗಳು ಒಳಗೊಂಡಿದ್ದು, ಜನವರಿ 2012 ರಂದು ಮೆ॥ ರಾಮ್ಕಿ ಇನ್ಫ್ರಾಸ್ಟ್ರಕ್ಚರ್ (Ramki Infrastructure) ಹೈದರಾಬಾದ್ ರವರಿಗೆ ಅವಾರ್ಡ್ ನೀಡಲಾಗಿದೆ.

ಒಟ್ಟು 32 ಸಂಖ್ಯೆ 11 ಕೆ. ವಿ. ಮಾರ್ಗ ನಿರ್ಮಿಸುವ ಗುರಿ ಹೊಂದಲಾಗಿದ್ದು, ಈಗಾಗಲೇ 31 ಮಾರ್ಗಗಳ ಕಾಮಗಾರಿ ಪೂರ್ಣಗೊಂಡು ಬಾಕಿ 1 ಸಂಖ್ಯೆ 11 ಕೆ. ವಿ. ಮಾರ್ಗ ನಿರ್ಮಿಸಬೇಕಾಗಿದೆ.

ಜುಲೈ–2014ರ ಒಳಗಾಗಿ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಿ 11 ಕೆ. ವಿ. ಮಾರ್ಗಗಳನ್ನು ಚಾಲನೆಗೊಳಿಸಲಾಗುವುದು.

ತಾಲ್ಲೂಕುವಾರು ಪ್ರಗತಿಯ ವಿವರ ಈ ಕೆಳಕಂಡಂತಿದೆ:

ಕ್ರ. ಸಂ.	ತಾಲ್ಲೂಕು	ಪ್ರಸ್ತಾವಿತ 11 ಕೆ.ವಿ. ಮಾರ್ಗಗಳು	ಕಾಮಗಾರಿಗಳು ಪೂರ್ಣಗೊಂಡ ಮಾರ್ಗಗಳ ಸಂಖ್ಯೆ	ಕಾಮಗಾರಿಗಳು ಕೈಗೊಳ್ಳಬೇಕಾದ ಬಾಕಿ ಮಾರ್ಗಗಳು
1	ಮುಂಡರಗಿ	6	6	0
2	ಶಿರಹಟ್ಟಿ	7	6	1
3	ನರಗುಂದ	3	3	0

4	ಗದಗ	5	5	0
	ಒಟ್ಟು	**32**	**31**	**1**

ಲೋಕೋಪಯೋಗಿ ರಸ್ತೆಗಳು

145 (1676); ಶ್ರೀಮತಿ ಶಾರದಾ ಪೂರ್ಯನಾಯ್ಕ (ಶಿವಮೊಗ್ಗ ಗ್ರಾಮಾಂತರ)

(ಅ) ಲೋಕೋಪಯೋಗಿ ಇಲಾಖೆಯಿಂದ ವಿವಿಧ ಲೆಕ್ಕ ಶೀರ್ಷಿಕೆಯಡಿ ಬಿಡುಗಡೆ ಮಾಡುವ ಅನುದಾನದಲ್ಲಿ 2014–15ನೇ ಸಾಲಿಗೆ 13ನೇ ಹಣಕಾಸು ಯೋಜನೆ ಮತ್ತು ಎಸ್.ಸಿ.ಪಿ./ಟಿ.ಎಸ್.ಪಿ. ಯೋಜನೆಯಡಿ ಸಿಸಿ ರಸ್ತೆಗಳ ಅಭಿವೃದ್ಧಿಗೆ ಆರ್ಥಿಕ ಮತ್ತು ಭೌತಿಕ ಗುರಿ ನಿಗದಿಪಡಿಸಿ ಆದೇಶ ಹೊರಡಿಸಲಾಗಿದೆಯೆ; ಹಾಗಿದ್ದಲ್ಲಿ ವಿಧಾನಸಭಾ ಕ್ಷೇತ್ರವಾರು ಪ್ರತ್ಯೇಕ ಮಾಹಿತಿ ನೀಡುವುದು;

(ಆ) ಕ್ರಿಯಾಯೋಜನೆ ತಯಾರಿಸುವುದಕ್ಕೆ ಸರ್ಕಾರ ನಿಗದಿಪಡಿಸಿರುವ ನಿಯಮಗಳೇನು; (ಸುತ್ತೋಲೆ ಪ್ರತಿ ನೀಡುವುದು);

(ಇ) ಶಿವಮೊಗ್ಗ ಗ್ರಾಮಾಂತರ ವಿಧಾನಸಭಾ ಕ್ಷೇತ್ರಕ್ಕೆ ಲೋಕೋಪಯೋಗಿ ಇಲಾಖೆಯಿಂದ ವಿವಿಧ ಲೆಕ್ಕಶೀರ್ಷಿಕೆಯಡಿ ಬಿಡುಗಡೆ ಮಾಡುವ ಅನುದಾನದಲ್ಲಿ 2014–15ನೇ ಸಾಲಿಗೆ 13ನೇ ಹಣಕಾಸು ಯೋಜನೆ ಮತ್ತು ಎಸ್.ಸಿ.ಪಿ./ಟಿ.ಎಸ್.ಪಿ. ಯೋಜನೆಯಡಿ ನಿಗದಿಪಡಿಸಿರುವ ಆರ್ಥಿಕ ಮತ್ತು ಭೌತಿಕ ಗುರಿ ಮತ್ತು ಬಿಡುಗಡೆಯಾಗಿರುವ ಅನುದಾನವೆಷ್ಟು (ವಿವರ ನೀಡುವುದು);

(ಈ) ಈಗಾಗಲೇ ಶಿವಮೊಗ್ಗ ಗ್ರಾಮಾಂತರ ವಿಧಾನಸಭಾ ಕ್ಷೇತ್ರದ ಕ್ರಿಯಾ ಯೋಜನೆ ಸರ್ಕಾರಕ್ಕೆ ಅನುಮೋದನೆಗೆ ಬಂದಿದೆಯೇ; ಹಾಗಿದ್ದರೆ, ವಿಧಾನಸಭಾ ಸದಸ್ಯರ ಗಮನಕ್ಕೆ ಬಾರದೆ ಕ್ರಿಯಾಯೋಜನೆ ತಯಾರಿಸಲು ಸರ್ಕಾರದ ನಿರ್ದೇಶನವಿದೆಯೇ (ಮಾಹಿತಿ ನೀಡುವುದು);